ಓಎಸ್ 206/2013

**ಡಿ.ಡಬ್ಲ್ಯೂ: 01.**

ದಿನಾಂಕಃ 31.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀಸವಾಲು ವಾದಿ ಪರ ಶ್ರೀ ಬಿ ಎಸ್ ವೈ ವಕೀಲರಿಂದಃ**

ನಾನು ಸರ್ವೆ ನಂ.**37/3** ಜಮೀನನ್ನು ಖರೀದಿಸಿರುತ್ತೇನೆ ಅದರ ವಿಸ್ತೀರ್ಣ **2** ಎಕರೆ **9** ಗುಂಟೆ. ನಾನು ಸದರಿ ಸರ್ವೆ ನಂಬರ್ ಅನ್ನು ರೂ.**2,90,000/-** ಹಣ ನೀಡಿ ಖರೀದಿ ಮಾಡಿರುತ್ತೇನೆ. ನಾನು **2013** ನೇ ಇಸವಿಯಲ್ಲಿ ಖರೀದಿ ಮಾಡಿರುತ್ತೇನೆ. ನೀವು ಖರೀದಿ ಮಾಡುವ ಸಮಯಕ್ಕೆ ಈ ನ್ಯಾಯಾಲಯದಲ್ಲಿ ಈ ದಾವೆ ದಾಖಲಾಗಿತ್ತು ಹಾಗೂ ನಿಮಗೆ ಅದರ ನೋಟಿಸ್ ಬಂದಿತ್ತು ಎಂದರೆ ಸರಿಯಲ್ಲ. ನಾನು ಖರೀದಿ ಮಾಡುವ ಮುನ್ನವೇ ಕ್ರಯದ ಕರಾರು ಆಗಿರುತ್ತದೆ. ದಾವಾಸ್ತಿ ವಾದಿಗೆ ಸೇರಿರುತ್ತದೆ ಎಂಬ ಬಗ್ಗೆ ನಿಮಗೆ ನೋಟಿಸ್ನನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಖರೀದಿ ಮಾಡುವ ಮುನ್ನ ನ್ಯಾಯಾಲಯದಿಂದ ನಿಮಗೆ ನೋಟಿಸ್ ಜಾರಿಯಾಗಿತ್ತು ಎಂದರೆ ಸರಿಯಲ್ಲ. ನಾನು ದಾವಾಸ್ತಿಯನ್ನು ಖರೀದಿ ಮಾಡುವ ಮುನ್ನ **1** ನೇ ಪ್ರತಿವಾದಿಯ ಕುಟುಂಬದ ಬಗ್ಗೆ ತಿಳಿದುಕೊಂಡಿರುತ್ತೇನೆ. ಖರೀದಿ ಮಾಡುವ ಸಮಯದಲ್ಲಿ **1** ನೇ ಪ್ರತಿವಾದಿರವರ ಕುಟುಂಬದ ಸಹಿಯನ್ನು ಪಡೆದಿರುವುದಿಲ್ಲ ಎಂದರೆ ಸರಿ. ದಾವಾಸ್ತಿ ಪಿತ್ರಾರ್ಜಿತ ಆಸ್ತಿಯಾದ ಕಾರಣ **1** ನೇ ಪ್ರತಿವಾದಿಯಿಂದ ಮಾತ್ರ ಖರೀದಿ ಮಾಡಿದ್ದ ಕಾರಣ ಸದರಿ ಕ್ರಯ ಊರ್ಜಿತವಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ದಾವಾಸ್ತಿ **1** ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ. **1** ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ಹೇಳಲು ನನ್ನ ಬಳಿ ದಾಖಲಾತಿಗಳು ಇವೆ. ನಾನು ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನೀವು **1** ನೇ ಪ್ರತಿವಾದಿಗೆ ಸೇರಿರುವ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ಗೃಹಿಣಿ. ನನಗೆ ನನ್ನ ಗಂಡನ ಆದಾಯವನ್ನು ಹೊರತುಪಡಿಸಿ ಇನ್ಯಾವುದೇ ಆದಾಯವಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಗೃಹಿಣಿಯರಿಗೆ ಗಂಡನ ಆದಾಯವನ್ನು ಬಿಟ್ಟು ಬೇರೆ ಯಾವುದೇ ಆದಾಯ ಇರುವುದಿಲ್ಲ ಎಂದರೆ ಸರಿ. ಆದ ಕಾರಣ **1** ನೇ ಪ್ರತಿವಾದಿಗೂ ಸಹ ಯಾವುದೇ ಆದಾಯವಿರಲಿಲ್ಲ, ಅವರ ಗಂಡನ ಆದಾಯದಿಂದ ದಾವಾಸ್ತಿಯನ್ನು ಖರೀದಿ ಮಾಡಿರುವುದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು **1** ನೇ ಪ್ರತಿವಾದಿಯ ಗಂಡ ಸರಿಇರಲಿಲ್ಲ, ಆದ ಕಾರಣ **1** ನೇ ಪ್ರತಿವಾದಿಯ ತಂದೆ **1** ನೇ

ಪ್ರತಿವಾದಿಗೆ ಆ ಜಮೀನನ್ನು ಖರೀದಿ ಮಾಡಿಕೊಟ್ಟಿರುತ್ತಾರೆ. 1ನೇ ಪ್ರತಿವಾದಿಯ ಗಂಡ ಸರಿ ಇರಲಿಲ್ಲ ಎಂದರೆ ಅವರಿಗೆ ಕುಡಿಯುವ ಹಾಗೂ ಇತರೆ ಚಟಗಳು ಇದ್ದವು. ನಾನು 1ನೇ ಪ್ರತಿವಾದಿಯ ಗಂಡನನ್ನು ನೋಡಿರುವುದಿಲ್ಲ. 1ನೇ ಪ್ರತಿವಾದಿಯ ಗಂಡನಿಗೆ ಚಟವಿದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನೀವು ವಾದಿಗೆ ಮೋಸ ಮಾಡಲು 1ನೇ ಪ್ರತಿವಾದಿಯ ಗಂಡನಿಗೆ ಚಟವಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಅವರ ತಂದೆ ಖರೀದಿ ಮಾಡಿಕೊಟ್ಟರು ಎಂದು ಹೇಳಿರುವ ಬಗ್ಗೆ ಕ್ರಯಪತ್ರದಲ್ಲಿ ನಮೂದಾಗಿಲ್ಲ ಎಂದರೆ ಸರಿ. ನೀವು ದಾವಾಸ್ತಿಯನ್ನು ಲಪಟಾಯಿಸಲು 1ನೇ ಪ್ರತಿವಾದಿಯ ತಂದೆ ಖರೀದಿ ಮಾಡಿ ಕೊಟ್ಟಿರುವುದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ತಂದೆ ಖರೀದಿ ಮಾಡಿಕೊಟ್ಟ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ, ನೀವು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹಾಗೂ ನಿಮ್ಮ ಕುಟುಂಬದವರು ಇದೇ ರೀತಿ ಅನ್ಯ ಮಾರ್ಗಗಳಿಂದ ಪತ್ರಗಳನ್ನು ಸೃಷ್ಟಿಸುವುದೇ ನಿಮ್ಮ ವ್ಯವಹಾರ ಎಂದರೆ ಸರಿಯಲ್ಲ. 1ನೇ ಪ್ರತಿವಾದಿರವರು ಕುಟುಂಬದವರನ್ನು ಸೇರಿಸದೇ ನೀವು 1ನೇ ಪ್ರತಿವಾದಿಯಿಂದ ಮಾತ್ರ ಆಸ್ತಿಯನ್ನು ಖರೀದಿ ಮಾಡಿರುತ್ತೀರಿ ಆದ್ದರಿಂದ ಅದು ಊರ್ಜಿತವಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ**ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.